## ಮಾತು-ಕತೆ

> ಹಿಂದೆ ಸಾಹಿತಿಗಳ ಮನೆಯಲ್ಲಿ ಗೋಷ್ಠಿಗಳು ನಡೆಯುತ್ತಿದ್ದವು. ಅನೇಕ ಲೇಖಕರು ಅಲ್ಲಿ ಒಟ್ಟು ಸೇರಿ ನಾಡು, ನುಡಿ, ಸಾಹಿತ್ಯ, ಸಮಕಾಲೀನ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚೆ ನಡೆಸುತ್ತಿದ್ದರು. ಇತ್ತೀಚಿಗಿನ ದಿನಗಳಲ್ಲಿ ಸಾಹಿತಿಗಳು ಪರಸ್ಪರ ಅಂತರವನ್ನು ಸೃಷ್ಟಿಸಿಕೊಂಡು ದ್ವೀಪಗಳಾಗುತ್ತಿದ್ದಾರೆ....

ಪ್ರಾದೇಶಿಕ ಭಿನ್ನತೆ ಬಹಳ. ಗೋವಾ, ಕರ್ನಾಟಕ ಹಾಗೂ ಕೇರಳ ರಾಜ್ಯದವರು ಬಳಸುವ ಕೊಂಕಣಿಯಲ್ಲಿ ಅಪಾರ ವ್ಯತ್ಯಾಸಗಳಿವೆ. ಅದೇ ರೀತಿ ಗೌಡ ಸಾರಸ್ವತ ಕೊಂಕಣಿ, ಕ್ರಿಶ್ಚಿಯನ್ ಕೊಂಕಣಿ ಎಂಬ ಪ್ರಭೇದಗಳು ಕೂಡ ಇವೆ. ಇನ್ನು ಲಿಪಿಯ ಕುರಿತು ಹೇಳುವುದಾದರೆ ಕೊಂಕಣಿ ಲೇಖಕರು ಕರ್ನಾಟಕದಲ್ಲಿ ಕನ್ನಡ ಲಿಪಿಯನ್ನು ಗೋವಾ, ಕೇರಳದಲ್ಲಿ ನಾಗರಿ ಲಿಪಿಯನ್ನು ಬಳಸುತ್ತಾರೆ. ಹೀಗಾಗಿ ಅನುವಾದಕನಿಗೆ ಮೇಲೆ ಉಲ್ಲೇಖಿಸಿದ ಭಾಷಾಪ್ರಭೇದಗಳು, ಲಿಪಿ ವೈವಿಧ್ಯಗಳು ತಿಳಿದಿರಬೇಕಾಗುತ್ತದೆ. ಜೊತೆಗೆ ಅನೇಕ ಸಂದರ್ಭಗಳಲ್ಲಿ ಸ್ಥಳೀಯ ನುಡಿಗಟ್ಟುಗಳ ಅರ್ಥ ಗೊತ್ತಿರಬೇಕಾಗುತ್ತದೆ. ನಾನು ನಾಲ್ಕು ದಶಕಗಳ ಕಾಲ ಗೋವೆಯಲ್ಲಿ ನೆಲೆಸಿ, ಅಲ್ಲಿಯ ಸ್ಥಳೀಯ ಭಾಷೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದರೂ, ಮಹಾಬಳೇಶ್ವರ ಸೈಲ್, ದಾಮೋದರ ಮಾವಜೊ ಮೊದಲಾದ ಗೋವಾದ ಕೊಂಕಣಿ ಭಾಷೆಯ ಲೇಖಕರ ಕೃತಿಗಳನ್ನು ಅನುವಾದಿಸುವಾಗ, ಅವರು ಬಳಸಿದ ಅನೇಕ ಪದಗಳಿಗೆ ಸರಿಯಾದ ಅರ್ಥವನ್ನು ಕಂಡುಕೊಳ್ಳುವ ಸಲುವಾಗಿ ಅವರೊಂದಿಗೆ ಕುಳಿತು ಚರ್ಚಿಸಬೇಕಾದ ಸಂದರ್ಭಗಳು ನನಗೆ ಬಂದಿದ್ದವು.

ನನಗೆ ನಿಜವಾಗಿಯೂ ಸವಾಲು ಎನಿಸಿದ ಕೃತಿ ಎಂದರೆ ಅಮೃತಾ ಪ್ರೀತಂ ಅವರ 'ನಾ ರಾಧಾ ನಾ ರುಕ್ಮಿಣಿ' ಕಾದಂಬರಿ ಅನುವಾದ. ಪಂಜಾಬಿ ಲೇಖಕಿ ಅಮೃತಾ ಪ್ರೀತಂ ಅವರ ಈ ಕಾದಂಬರಿಯಲ್ಲಿ ಬಳಕೆಯಾದ ಮುಸ್ಲಿಮ್ ಸಮುದಾಯಕ್ಕೆ ಸಂಬಂಧಿಸಿದ ಅನೇಕ ಪದಗಳು ನಿಘಂಟುವಿನಲ್ಲಿ, ಅರ್ಥಕೋಶದಲ್ಲಿ ಸಿಗದೆ ಅನುವಾದ ಕಾರ್ಯಕ್ಕೆ ತೊಡಕಾಗಿತ್ತು. ಈ ಪದಗಳ ಅರ್ಥವನ್ನು ಕಂಡುಕೊಳ್ಳುವ ಸಲುವಾಗಿ ನಾನು ಅನೇಕ ಮಂದಿಯನ್ನು ಸಂಪರ್ಕಿಸಿದ್ದೆ. ಆಮೇಲೆ ಕೊನೆಗೆ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕಿಯೊಬ್ಬರು ಆ ಪದಗಳ ಸರಿಯಾದ ಅರ್ಥವನ್ನು ಸೂಚಿಸಿ ನನ್ನ ಕೆಲಸವನ್ನು ಹಗುರವಾಗಿಸಿದರು.

ಹೀಗೆ ಎಷ್ಟೋ ಬಾರಿ ಅನುವಾದಕರು ಭಾಷೆಗೆ ಸಂಬಂಧಿಸಿದ ಅನೇಕ ಅಡೆತಡೆಗಳನ್ನು ಎದುರಿಸಿ ತಮ್ಮ ಕಾರ್ಯವನ್ನು ನಡೆಸಬೇಕಾಗುತ್ತದೆ.

- ನೀವು ಮಧುಪ, ಗಂಗಾತನಯ, ಸಮೀರ ಮೊದಲಾದ ಕಾವ್ಯನಾಮಗಳಲ್ಲಿ ಬರೆಯುತ್ತಿದ್ದಿರಿ. ನಿಮ್ಮ ಕಾರ್ಯಸಾಧನೆಯನ್ನು ಚೆನ್ನಾಗಿ ತಿಳಿದುಕೊಂಡವರು ನಿಮ್ಮನ್ನು ಕೆಲವು ವಿಶೇಷಣಗಳಿಂದ, ಉದಾಹರಣೆಗೆ 'ಕನ್ನಡಪ್ರೇಮಿ' (ಡಾ. ವಿ.ಎಸ್. ಸೋಂದೆ), 'ಕನ್ನಡದ ಕಟ್ಟಾಳು' (ಸೀತಾರಾಮ ಹೆಗಡೆ), 'ಸಾಹಿತ್ಯರಥದ ಸಾರಥಿ' (ಬಿ. ಹರಿಶ್ಚಂದ್ರ ಭಟ್), 'ಶ್ರೇಷ್ಠ ಸಾಹಿತ್ಯ ಪರಿಚಾರಕ' (ಜಿ.ಎಸ್. ಆಮೂರ) ಗುರುತಿಸಿದ್ದಾರೆ. ಇದರಲ್ಲಿ ಸಾಹಿತ್ಯ ಪರಿಚಾರಕ ಎಂಬ ಪರಿಕಲ್ಪನೆಯ ಕುರಿತು ನಿಮ್ಮ ಅನಿಸಿಕೆಗಳೇನು?